4. ಶುದ್ಧೀಕರಣ ಘಟಕದ Sludge disposal ಪೈಪ್ ಅಳವಡಿಕೆಯಲ್ಲಿ ಭೂಮಾಲೀಕರು ತಕರಾರು ಮಾಡಿರುವುದು.

ಈ ಯೋಜನೆಯ ವಿಳಂಬಕ್ಕೆ ಗುತ್ತಿಗೆದಾರರೇ ಹೊಣೆಗಾರರಾಗಿದ್ದು, ಟೆಂಡರ್ ನಿಯಮಾವಳಿಯಂತೆ ಗುತ್ತಿಗೆದಾರರ ರಿಸ್ಕ್ ಅಂಡ್ ಕಾಸ್ಟ್ ಆಧಾರದ ಮೇಲೆ ಉಳಿದ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

1010 ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ಕ್ಷೇತ್ರದ ದಾಸನಪುರ ಹೋಬಳಿಯ ಮಾದವರ, ಮಾದನಾಯಕನಹಳ್ಳಿ ಹಾಗೂ ದಾಸನಪುರ ಪಂಚಾಯತ್‌ಗಳ ವ್ಯಾಪ್ತಿಗೆ ಇರುವ ಒಟ್ಟು ಕಾರ್ಖಾನೆಗಳ ಸಂಖ್ಯೆ ಎಷ್ಟು?

ಆ) ಈ ವಾಣಿಜ್ಯ ಉದ್ದೇಶಕ್ಕಾಗಿ ಸರ್ಕಾರ ಕಟ್ಟಿರುವ ಕಟ್ಟಡಗಳು (ಗೋಡೌನ್) ಸಂಖ್ಯೆ ಎಷ್ಟು; ಇದರಿಂದ ಬರುವ ವಾರ್ಷಿಕ ಆದಾಯ ಎಷ್ಟು? ಹಾಗೂ ಪ್ರತಿ ಪಂಚಾಯತಿಗೆ ಬರುವ ಆದಾಯ ವಿವರ ನೀಡುವುದು?

ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆಯ ಯಲಹಂಕ ಕ್ಷೇತ್ರದ ದಾಸನಪುರ ಗ್ರಾಮ ಪಂಚಾಯಿತಿಯಲ್ಲಿ 51, ಮಾದಾವರ ಗ್ರಾಮ ಪಂಚಾಯತಿಯಲ್ಲಿ 6 ಮತ್ತು ಮಾದನಾಯಕನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ 10 ಕಾರ್ಖಾನೆ-ಗಳಿರುತ್ತವೆ.

ಆ) ಈ ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರ ಕಟ್ಟಿರುವ (ಗೋಡೌನ್) ಕಟ್ಟಡಗಳು ಇರುವುದಿಲ್ಲ. ಆದ್ದರಿಂದ ಗೋಡೌನ್‌ಗಳಿಂದ ಯಾವುದೇ ಆದಾಯ ಇರುವುದಿಲ್ಲ.

99 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಶಾಶ್ವತ ಕುಡಿಯುವ ನೀರಿನ ಸರಬರಾಜು ಯೋಜನೆಯ ಪ್ರಸ್ತಾವನೆಯನ್ನು ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;